ನಿಲುವಳಿ ಸೂಚನೆಗೆ ಆಕಸ್ಮಾತ್ ತಾವು ಒಪ್ಪಿಗೆ ಕೊಟ್ಟಿದ್ದರೆ ಅವರ್ಯಾರು ಮಾತನಾಡಲಿಕ್ಕೆ ಅವಕಾಶವಿರುತ್ತಿರಲಿಲ್ಲ . ನಿಲುವಳಿ ಸೂಚನೆಗೆ ಸಹಿ ಮಾಡಿದವರಿಗೆ ಮಾತ್ರ ಇರುತ್ತಿತ್ತು. ಅದಕ್ಕೆ tit for tat ರೀತಿಯಲ್ಲಿ ಭಾರಿ ಜಾಣತನವನ್ನು ಮಾಡಿದ್ದಾರೆ, ಇರಲಿ .

ಶ್ರೀ ಕೆ.ಜಯಪ್ರಕಾಶ್ ಹೆಗ್ಡೆ:– ಆ ವಿಚಾರವೇ ನಮ್ಮಲ್ಲಿ ಇಲ್ಲ, not at all.

ಶ್ರೀ ವಾಟಾಳ್ ನಾಗರಾಜ್:– ಅದರ ಬಗ್ಗೆ ನಮ್ಮಲ್ಲಿ ಭೇದಭಾವವೇ ಇಲ್ಲ. ಹಾಗಾಗಿ ಆ ಬಗ್ಗೆ ಮಾನ್ಯ ಪ್ರಕಾಶ್‌ರವರು ನಮ್ಮನ್ನು ಬೇರೆ ಮಾಡತಕ್ಕಂಥ ವ್ಯವಸ್ಥೆ ಆಗುವುದು ಬೇಡ.

ಅಧ್ಯಕ್ಷರು:– ಈಗ ಆಯಿತು ಬಿಡಿ, ಅವೆಲ್ಲಾ ಮುಕ್ತಾಯವಾಯಿತಲ್ಲ, ಈಗ ಯಾರು ಮಾತನಾಡುವವರು ದಯಮಾಡಿ ಮಾತನಾಡಿ.

ಶ್ರೀ ಜೆ.ಸಿ.ಮಾಧುಸ್ವಾಮಿ:– ನಾನು ಮಾತನಾಡುತ್ತಿದ್ದೆ, 15 ನಿಮಿಷದಲ್ಲಿ ನನ್ನ ಮಾತನ್ನು ಮುಗಿಸುತ್ತೇನೆ.

ಅಧ್ಯಕ್ಷರು:– ಈಗ ತಮ್ಮ ಭಾಷಣದ ನಂತರ ರಾಜ್ಯಪಾಲರ ವಂದನಾ ನಿರ್ಣಯವನ್ನು ಮೂವ್ ಮಾಡಿಸಿಬಿಡುತ್ತೇನೆ .

ಶ್ರೀ ಜೆ.ಸಿ.ಮಾಧುಸ್ವಾಮಿ:– ಈಗಲೇ ಮೂವ್ ಮಾಡಿಸಿ ಸರ್, ಆಮೇಲೆ ಮಾತನಾಡುತ್ತೇನೆ.

ಅಧ್ಯಕ್ಷರು:– ಸರಿ ಈಗಲೇ ರಾಜ್ಯಪಾಲರ ಭಾಷಣಕ್ಕೆ ವಂದನಾರ್ಪಣೆಯ ಪ್ರಸ್ತಾಪವನ್ನು ವಿಶ್ವೇಶ್ವರ ಹೆಗಡೆ ಕಾಗೇರಿಯವರು ಮೂವ್ ಮಾಡುತ್ತಾರೆ, ಆ ನಂತರ ಮಾಧುಸ್ವಾಮಿಯವರು ಮಾತನಾಡಲಿ.

6. ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವ

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ (ಅಂಕೋಲ):– ``2007 ರ ಜನವರಿ 25 ರಂದು ವಿಧಾನಮಂಡಲದ ಉಭಯ ಸದನಗಳ ಸದಸ್ಯರುಗಳನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನ ಸಭೆಯ ಸದಸ್ಯರಾದ ನಾವು ರಾಜ್ಯಪಾಲರಿಗೆ ಕೃತಜ್ಞತಾ ಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇನೆ ಎಂದು ಸೂಚಿಸುತ್ತೇನೆ``.

ಶ್ರೀ ಕ್ಯಾತ್ಸಂದ್ರ ರಾಜಣ್ಣ (ಬೆಳ್ಳಾವಿ) : ಮಾನ್ಯ ಅಧ್ಯಕ್ಷರೇ ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿಯವರು ಸೂಚಿಸದ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವವನ್ನು ಅನುಮೋದಿಸುತ್ತೇನೆ.

ಅಧ್ಯಕ್ಷರು: ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವವನ್ನು ಮಂಡಿಸಲಾಯಿತು.

ಅಧ್ಯಕ್ಷರು:– ಮಾಧುಸ್ವಾಮಿಯವರೇ, ಕುಮಾರ್ ಬಂಗಾರಪ್ಪನವರು urgent ಆಗಿ ಶೂನ್ಯವೇಳೆ ಕೇಳುತ್ತೇನೆಂದು ಹೇಳುತ್ತಿದ್ದಾರೆ.

ಶ್ರೀ ಜೆ.ಸಿ.ಮಾಧುಸ್ವಾಮಿ:– ಆಗಬಹುದು.

7. ಅಧ್ಯಕ್ಷರ ಅಪ್ಪಣೆ ಮೇರೆಗೆ ಚರ್ಚಿಸಲಾದ ವಿಷಯಗಳು

ವಿಷಯ : ಅ) ಜನವರಿ 2007 ದಿನಾಂಕ 13 ರಿಂದ 22 ರವರೆಗೆ ಸೊರಬದಲ್ಲಿ ನಡೆದ ಎನ್.ಎಸ್.ಎಸ್. ಕ್ಯಾಂಪ್ ಸಂಬಂಧದಲ್ಲಿ ಸೊರಬ ಸರ್ಕಲ್ ಇನ್ಸಪೆಕ್ಟರ್‌ರವರ ಅಸಭ್ಯ ವರ್ತನೆ, ದಬ್ಬಾಳಿಕೆ ಬಗ್ಗೆ.

ಶ್ರೀ ಎಸ್. ಕುಮಾರ್ ಬಂಗಾರಪ್ಪ (ಸೊರಬ):– ದಿನಾಂಕ 13 ರಿಂದ 22ನೇ ದಿನಾಂಕದವರೆಗೆ ಒಂದು ಎನ್.ಎಸ್.ಎಸ್. ಕ್ಯಾಂಪ್ ನಮ್ಮ ತಾಲ್ಲೂಕಿನಲ್ಲಿ ನಡೆಯಿತು. 22ನೇ ದಿನಾಂಕದಂದು ಗುದ್ದಲಿ, ಪಿಕಾಸಿ ಎಲ್ಲಾ ಸಾಮಗ್ರಿಗಳನ್ನು ಹಾಕಿ ಊರಿನವರೆಲ್ಲಾ ಸೇರಿ ಮಕ್ಕಳನ್ನೆಲ್ಲರನ್ನು ಊರಿನಿಂದ ಬೀಳ್ಕೊಟ್ಟೆವು. ನಂತರ ವಾಪಸ್ಸು ಬರಬೇಕಾದರೆ ಆ ತಾಲ್ಲೂಕಿನ ಸರ್ಕಲ್ ಇನ್ಸ್‌ಪೆಕ್ಟರ್ ಆ ಲಾರಿಯನ್ನು ನಿಲ್ಲಿಸಿ ಆ ಹುಡುಗರ ಸಮೇತ ಎಲ್ಲರನ್ನು ಸ್ಟೇಷನ್ನಿಗೆ ಕರೆದುಕೊಂಡು ಹೋಗಿ ಇಟ್ಟುಕೊಂಡರು. ನಂತರ ಗ್ರಾಮಸ್ಥರು ಸ್ಟೇಷನ್ನಿಗೆ ಹೋಗಿ ಇದು ಎನ್.ಎಸ್.ಎಸ್. ಕ್ಯಾಂಪ್‌ನಿಂದ ನಡೆಯುತ್ತಿರುವುದು ಎಂದು ವಿನಂತಿಸಿದರು. ಅಲ್ಲಿ ಬಸ್ಸಿನ ಸೌಕರ್ಯ ಇಲ್ಲದಿರುವುದರಿಂದ ಸೊರಬದಿಂದ 3–4 ಕಿ.ಮೀ. interior ನಲ್ಲಿರುವ ಒಂದು ಹಳ್ಳಿಯಿಂದ ಆ ಲಾರಿ ಹೋಗುತ್ತಿತ್ತು. ಏಕಾಏಕಿ ಆ ಸರ್ಕಲ್ ಇನ್ಸ್‌ಪೆಕ್ಟರ್ ಹೋಗಿ ಗ್ರಾಮದ ಅಧ್ಯಕ್ಷರ ಮೇಲೆ ಹಲ್ಲೆ ಮಾಡಿ ಅವರಿಗೆ ಅಸಾಲ್ಟ್ ಕೂಡ ಮಾಡಿದರು. ಅಸಾಲ್ಟ್ ಮಾಡಿದ ಮೇಲೆ ಗ್ರಾಮಸ್ಥರೆಲ್ಲಾ ಪಕ್ಷಾತೀತವಾಗಿ ಹೋಗಿ ಸರ್ಕಲ್ ಇನ್ಸ್‌ಪೆಕ್ಟರ್‌ರವರ ಅಸಭ್ಯ ವರ್ತನೆ, ದಬ್ಬಾಳಿಕೆ ಮಾಡುತ್ತಿರುವುದಕ್ಕೆ ಅವರ ಮೇಲೆ ಪ್ರತಿಭಟನೆ ಮಾಡಿದರು. ಈ ಕ್ಷಣದಲ್ಲಿಯೂ ಸಹ ಆಟೋರಿಕ್ಷಾದವರು, ಟೆಂಪೋದವರು, ರೈತರು,